ಸಾಕ್ಷಿಯನ್ನು ದಿನಾಂಕಃ **15.09.2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಆರ್.ಎಸ್.ಹೆಚ್ ಆರೋಪಿ ಪರ ವಕೀಲರಿಂದಃ**

ಈಗ ಮುಂಡಗೋಡ್ ಬ್ರಾಂಚ್ ಗೆ ದಿನಾಂಕಃ 30.05.2023 ರಂದು ಬಂದಿರುತ್ತೇನೆ. ನಾನು ಈ ಬಗ್ಗೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುತ್ತೇನೆ. ನಾನು ಮುಂಡಗೋಡ ಬ್ರಾಂಚ್ ಗೆ ಬಂದ ಮೇಲೆ ಹೆಡ್ ಆಫೀಸನಲ್ಲಿ ಅಧಿಕಾರ ಪತ್ರವನ್ನು ನನಗೆ ಕೊಟ್ಟಿರುತ್ತಾರೆ. ಈ ಪ್ರಕರಣದಲ್ಲಿ ನನ್ನ ಮುಖಾಂತರ ನಿಪ.1 ರಿಂದ ನಿಪಿ.6 ನ್ನು ನಿಶಾನೆಗೊಳಿಸಲಾಗಿರುವುದಿಲ್ಲ ಎಂದರೆ ಹೌದು. ನಾನು ಮುಂಡಗೋಡ್ ಬ್ರಾಂಚ್ ಗೆ ಸೇರಿದ ನಂತರ, ಈ ಪ್ರಕರಣದಲ್ಲಿ ಅಧಿಕಾರ ಪತ್ರವನ್ನು ಹಾಜರುಪಡಿಸಿರುತ್ತೇನೆ. ನಿಪಿ.7 ರ **ದಿನಾಂಕವು 24.05.2023** ಆಗಿರುತ್ತದೆ. ನಿಪಿ.7 ನಾನು ಮುಂಡಗೋಡ್ ಬ್ರಾಂಚ್ ಗೆ ವರ್ಗಾವಣೆ ಹೊಂದುವ ಮೊದಲೇ ಕೊಡಲಾದ ದಾಖಲೆ ಎಂದರೆ ಹೌದು. ಸಾಮಾನ್ಯವಾಗಿ ಸರ್ಕಾರಿ ಕಚೇರಿಗಳಲ್ಲಿ ಮತ್ತು ಸಂಘ ಸಂಸ್ಥೆಗಳಲ್ಲಿ ಪ್ರಕರಣವನ್ನು ಮುಂದುವರೆಸಿಕೊಂಡು ಹೋಗಲು ಅಧಿಕಾರಿಯು ವರ್ಗಾವಣೆಗೊಂಡ ನಂತರ ಅಧಿಕಾರ ಪತ್ರ ಕೊಡಲಾಗುತ್ತದೆ ಎಂದರೆ ಹೌದು. ನಾನು ಮುಂಡಗೋಡ್ ಬ್ರಾಂಚ್ ಗೆ ಸೇರುವ ಮೊದಲೇ ನಿಪಿ.7 ನ್ನು ಕೊಟ್ಟ ಕಾರಣ, ಅದು ಕಾನೂನಿನ ಪ್ರಕಾರ ಮಾನ್ಯವಾಗಿಲ್ಲ ಎಂದರೆ, ಸಾಕ್ಷಿಯು ವರ್ಗಾವಣೆಗೊಂಡ ನಂತರವೇ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ಮುಖ್ಯ ಕಚೇರಿಯವರು ಹೊರಡಿಸಿದ ವರ್ಗಾವಣೆ ಆದೇಶದ ದಿನಾಂಕವನ್ನು ನಾನು ನೋಡಿ ಹೇಳಬೇಕಾಗುತ್ತದೆ.

ನನಗೆ ದಿನಾಂಕಃ 30.05.2023 ರಂದು ವರ್ಗಾವಣೆಯಾಗಿರುತ್ತದೆ ಎಂದರೆ , ಅದು ಜಾಯಿನಿಂಗ್ ಡೇಟ್ ಎಂದು ನುಡಿಯುತ್ತಾರೆ. ನಿಪಿ.7 ನ್ನು ನಾನೇ ಮುಂಡಗೋಡ್ ಬ್ರಾಂಚನಿಂದ ಸೃಷ್ಟಿಸಿಕೊಂಡ ದಾಖಲೆಯಾಗಿರುತ್ತದೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

ನಿಪಿ.1 ಮತ್ತು ನಿಪಿ.4 ರಲ್ಲಿ ಕಾಣುವ ಆರೋಪಿಯ ಸಹಿಗೆ ವ್ಯತ್ಯಾಸವಿದೆ ಎಂದರೆ, ಇಲ್ಲ. ನಾನು ನಿಪಿ.1 ಮುತ್ತ ನಿಪಿ.4 ನ್ನು ನೋಡಿರುವುದಿಲ್ಲ. ನಾನು ದಿನಾಂಕಃ 30.05.2023 ರಂದು ಮುಂಡಗೋಡ್ ಬ್ರಾಂಚ್ ಗೆ ಸೇರಿದ ನಂತರ, ಪರಿಶೀಲನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.1 ರಿಂದ ನಿಪಿ.7 ಏನೆಂದು ನನಗೆ ತಿಳಿದಿದೆಯೇ ಎಂದರೆ, ನೋಡಿ ಹೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ. ಆದ ಕಾರಣ ನನಗೆ ನನಗೆ ಈ ಪ್ರಕರಣದ ಬಗ್ಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ.1 ಮತ್ತು ನಿಪಿ.4 ರಲ್ಲಿ ಕಾಣುವ ಆರೋಪಿಯ ಸಹಿಯನ್ನು ನಾನು ನೋಡಿದ್ದೇನೆ. ಸಾಕ್ಷಿಗೆ ನಿಪಿ.1 ಮತ್ತು 4 ನ್ನು ತೋರಿಸಲಾಗಿ, ಅವುಗಳಲ್ಲಿರುವ ಸಹಿಗಳು ಬೇರೆ ಬೇರೆಯಾಗಿರುತ್ತವೆ ಎಂದರೆ, ಸಾಕ್ಷಿಯು ನಿಪಿ.1 ರಲ್ಲಿ ಪೂರ್ಣ ಸಹಿ ಇದ್ದು, ನಿಪಿ.4 ರಲ್ಲಿ ಸಣ್ಣದಾಗಿ ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.1 ರಲ್ಲಿ ಮೊತ್ತವನ್ನು ನಾವೇ ನಮೂದು ಮಾಡಿಕೊಂಡಿರುತ್ತೇವೆ ಎಂದರೆ, ಪಾರ್ಟಿಯೇ ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಮುಂಡಗೋಡ್ ಬ್ರಾಂಚ್ ಗೆ ಸೇರಿದ ನಂತರ, ಆರೋಪಿಯ ವಿದ್ಯಾಭ್ಯಾಸದ ಬಗ್ಗೆ ವಿಚಾರಿಸಿದ್ದು ಇರುವುದಿಲ್ಲ. ಆರೋಪಿಗೆ ಇಂಗ್ಲೀಷನಲ್ಲಿ ಓದಲು ಬರೆಯಲು ಬರುತ್ತದೆಯೇ ಎನ್ನುವ ಬಗ್ಗೆ ನಾನು ವಿಚಾರಿಸಿದ್ದು ಇರುವುದಿಲ್ಲ.

ನಿಪಿ.1 ರಲ್ಲಿರುವ ಹಸ್ತಾಕ್ಷರ ನಮ್ಮ ಬ್ರಾಂಚನವರದ್ದಾಗಿರುತ್ತದೆ ಎಂದರೆ ಸುಳ್ಳು. ನಮ್ಮ ಬ್ರಾಂಚನವರ ಸಾಲದ ವಸೂಲಾತಿಗಾಗಿ ಬಹಳ ಸಲ ಹೋಗಿರುತ್ತಾರೆ ಮತ್ತು ನೋಟಿಸ್ಸನ್ನೂ ಸಹ ಕೊಟ್ಟಿರುತ್ತಾರೆ. ನಮ್ಮ ಬ್ರಾಂಚನ ಹೆಸರಿಗೆ ಆರೋಪಿ ಚೆಕ್ ವಗೈರೆ ಕೊಟ್ಟಿದ್ದು ಇರುವುದಿಲ್ಲ ಎಂದರೆ, ಸಾಲದ ವಸೂಲಾತಿಗಾಗಿ ಹೋದಾಗ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಯು ಯಾವುದೇ ಚೆಕ್ ನ್ನು ಕೊಡದೇ ಇದ್ದರೂ ಸಹಿತ, ನಾನು ಸುಳ್ಳು ನುಡಿಯುತ್ತಿದ್ದೇನೆ

ಎಂದರೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಚೆಕ್ ಅಮಾನ್ಯವಾದ ನಮ್ಮ ಕಚೇರಿಯಿಂದ ಆರೋಪಿಗೆ ನೋಟಿಸ್ಸ ಕೊಡಲಾಗಿರುತ್ತದೆ.ಚೆಕ್ ಅಮಾನ್ಯವಾದ ಆರೋಪಿಗೆ ತಿಳಿದಿದೆಯೋ ಇಲ್ಲವೋ ಎನ್ನುವ ಬಗ್ಗೆ ಪರಿಶೀಲನೆ ಮಾಡಿರುತ್ತೀರಾ ಎಂದರೆ, ಆರೋಪಿಗೆ 23 ನೇ ತಾರೀಖಿನಂದು ಮುಟ್ಟಿರುತ್ತದೆ ಎಂದು ನುಡಿಯುತ್ತಾರೆ. ನಾನು ಹೇಳುವಂತೆ 23 ನೇ ತಾರೀಖಿನಂದು ಮುಟ್ಟದೇ ಇದ್ದರೂ ಸಹಿತ, ಮುಟ್ಟಿರುತ್ತದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೊದಲಿನ ಮ್ಯಾನೇಜರ್ ಸಲ್ಲಿಸಿದ ಎರಡು ಮುಖ್ಯ ವಿಚಾರಣೆ ಹಾಗೇ ಉಳಿದುಕೊಂಡಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಕೇಳಿ ತಿಳಿದುಕೊಂಡಿರುತ್ತೇನೆ. ಈ ಬಗ್ಗೆ ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿದ್ದು ಇರುವುದಿಲ್ಲ. ಆದ ಕಾರಣ ನಾನು ಸಲ್ಲಿಸಿದ ಮುಖ್ಯ ವಿಚಾರಣೆಗೆ ಯಾವುದೇ ಮಾನ್ಯತೆ ಇಲ್ಲ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯವಕಾಶ ಕೇಳಿದ್ದು ಸಮಯವಕಾಶ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

**ಪ್ರ ದ ನ್ಯಾದಂ ಮುಂಡಗೋಡ.**